# ***Form No.4.***

# ***Deposition Sheet( R.P.52)***

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC: 185/2024**

**PW1**

| | | |
|---|---|---|
| ಸಾಕ್ಷಿಯ ಹೆಸರು | ಃ | ರಾಜು ಮೂಲ್ಯ |
| ತಂದೆ ಹೆಸರು | ಃ | ಚಲ್ಲ ಮೂಲ್ಯ |
| ಪ್ರಾಯ | ಃ | 68 ವರ್ಷ |
| ಉದ್ಯೋಗ | ಃ | ಕೆಲಸ ಇರುವುದಿಲ್ಲ |
| ವಾಸ | ಃ | ಕಾಂತಾರಗೋಳಿ, ಎರ್ಲಪಾಡಿ ಗ್ರಾಮ, ಕಾರ್ಕಳ |

ದಿನಾಂಕ **: 25.10.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಶ್ರೀಮತಿ ಕೆ ಎಸ್. ಅರ್ಜಿದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಅರ್ಜಿದಾರ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 1 ಎಂದು, ದೂರಿನ ದೃಢೀಕೃತ

ಪ್ರತಿಯನ್ನು ಹಾಜರುಪಡಿಸಿದ್ದು, ನಿಪಿ - 2 ಎಂದು, ಸ್ಥಳ ಮಹಜರಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 3 ಎಂದು, ಕಚ್ಚಾ ನಕ್ಷೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 4 ಎಂದು, ಐಎಮ್‌ವಿ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 5 ಎಂದು, ಕಲಂ 160ರ ನೋಟೀಸಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 6 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 7 ಎಂದು, ನನ್ನ ಆಧಾರ್ ಕಾರ್ಡನ್ನು ಮತ್ತು ಅದರ ನೋಟರೀಕೃತ ನಕಲನ್ನು ಹಾಜರುಪಡಿಸಿದ್ದೇನೆ. (ನೋಟರೀಕೃತ ನಕಲನ್ನು ಮೂಲಪ್ರತಿಯೊಂದಿಗೆ ಹೋಲಿಸಿ ನೋಡಿದ ನಂತರ ಮೂಲಪ್ರತಿಯನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು). ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿಪಿ - 8 ಎಂದು, ಪೋಲೀಸರು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 9 ಎಂದು, ಸದರಿ ವಾಹನದ ಮಾಲೀಕರಿಗೆ ಪೋಲೀಸರು ಕಲಂ 133ರಡಿಯಲ್ಲಿ ನೀಡಿದ ನೋಟೀಸಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 10 ಎಂದು, ಸದರಿ ನೋಟೀಸಿಗೆ ನೀಡಿರುವ ಪ್ರತ್ಯುತ್ತರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 11 ಎಂದು ಗುರುತಿಸಲಾಯಿತು.

47 ಮೆಡಿಕಲ್ ಬಿಲ್ಲುಗಳನ್ನು 2 ನೇ ಎದುರುದಾರರ ಪರ ವಕೀಲರು ತಕರಾರು ಮಾಡಿದ್ದಾರೆ. ತಕರಾರಿಗೆ ಒಳಪಟ್ಟು ಒಟ್ಟಾಗಿ ನಿಪಿ - 12 ಎಂದು, 3 ಔಷಧಿ ಚೀಟಿಗಳು ನಿಪಿ - 13 ಎಂದು, 6 ವರದಿಗಳನ್ನು 2 ನೇ ಎದುರುದಾರರ ಪರ ವಕೀಲರು ತಕರಾರು ಮಾಡಿದ್ದಾರೆ. ತಕರಾರಿಗೆ ಒಳಪಟ್ಟು ನಿಪಿ - 14 ಎಂದು, 3 ಔಷಧಿ ಚೀಟಿಗಳನ್ನು ನಿಪಿ - 15 ಎಂದು, ಡಿಸ್‌ಚಾರ್ಜ್ ಸಮ್ಮರಿಯನ್ನು 2 ನೇ ಎದುರುದಾರರ ಪರ ವಕೀಲರು ತಕರಾರು ಮಾಡಿದ್ದಾರೆ. ತಕರಾರಿಗೆ ಒಳಪಟ್ಟು ನಿಪಿ - 16 ಎಂದು, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು 2 ನೇ ಎದುರುದಾರರ ಪರ ವಕೀಲರು ತಕರಾರು ಮಾಡಿದ್ದಾರೆ. ತಕರಾರಿಗೆ ಒಳಪಟ್ಟು ನಿಪಿ - 17 ಎಂದು ಗುರುತಿಸಲಾಯಿತು.

<u>ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಲಾಗಿದ್ದು, ನೀಡಲಾಯಿತು.</u>

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.